## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 9755/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಸಂಜಯಕುಮಾರ |
| ತಂದೆಃ ಗಂಡ | ಃ | ಬಾಬುರಾವ ಓಲೇಕಾರ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಬೆಣ್ಣೆಶಿರೂರ |

ದಿನಾಂಕಃ ೧೯.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-8 ನನ್ನ ಧರ್ಮಪತ್ನಿ, ಚಾಸಾ-2 ರಿಂದ 7, 9, 10 ರವರ ಪರಿಚಯ ಇರುತ್ತದೆ.

ನನ್ನ ಮಕ್ಕಳ ಮದುವೆ ಆಗಿತ್ತು ಅವರನ್ನು ಕಳಿಸುವುದಕ್ಕೋಸ್ಕರ ನಾನು, ನನ್ನ ಹೆಂಡತಿ ಹೋಗಿದ್ದೆವು, ಹೋಗಿ ಬರುವಷ್ಟರಲ್ಲಿ ನನ್ನ ಮನೆ ಕಳ್ಳತನವಾಗಿತ್ತು. ಸದರಿ ನಾವು ಮರಳಿ ಬಂದು ನೋಡಿದಾಗ ನಮ್ಮ ಮನೆ ಚಾವಿ ಒಡೆದಿತ್ತು, ಟ್ರೆಜರಿ ಕೀಲಿ ಮುರಿದಿತ್ತು, ಬಟ್ಟೆಗಳನ್ನು ಚೆಲ್ಲಾಪಿಲ್ಲಿ ಆಗಿತ್ತು, ಮನೆಯ ವಸ್ತುಗಳು ಏನು ಇರಲಿಲ್ಲ, ನಾನು ನನ್ನ ಬೀರುದಲ್ಲಿ ೨,೭೫,೦೦೦/- ಮತ್ತು ೫ ಗ್ರಾಂ ಬಂಗಾರ ಎರಡು ಲಾಕೀಟು, ಮತ್ತು ಬೆಳ್ಳಿ ಸಾಮಾನುಗಳು ಇದ್ದವು. ನಂತರ ಮರುದಿನ ಹೋಗಿ ನಾನು ಪೊಲೀಸ್ ಠಾಣೆಯಲ್ಲಿ ಫಿರ್ಯಾದಿ ಸಲ್ಲಿಸಿರುತ್ತೇನೆ. ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿಕೊಂಡು ಹೋಗಿರುತ್ತಾರೆ. ನಾನು ಫಿರ್ಯಾದಿ ಕೊಟ್ಟ ೧೫ ದಿನಗಳ ನಂತರ ಸಿ.ಪಿ.ಐ ರವರು ಪೋಲಿಸ್ ಠಾಣೆಗೆ ನಮ್ಮನ್ನು ಕರೆಸಿ ಇಷ್ಟಿಷ್ಟು ಬಂಗಾರ ಸಿಕ್ಕಿರುತ್ತದೆ, ನೀವು ನ್ಯಾಯಾಲಯಕ್ಕೆ ಹೋಗಿ ಬಿಡಿಸಿಕೊಳ್ಳಿ ಎಂದು ಸಲಹೆ ನೀಡಿರುತ್ತಾರೆ. ನಂತರ ನಾವು ನ್ಯಾಯಾಲಯದಿಂದ ಸದರಿ ಆಭರಣಗಳನ್ನು ಬಿಡಿಸಿಕೊಂಡು ಹೋಗಿರುತ್ತೇವೆ. ಪೋಲಿಸ್ ಠಾಣೆಯಲ್ಲಿ ಪೋಲಿಸರು ನನ್ನನ್ನು ಕರೆಸಿದಾಗ ನನ್ನಿಂದ ಮಾಹಿತಿ ತೆಗೆದುಕೊಂಡು ಬಿಟ್ಟಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು. ಬಂಗಾರ ಮತ್ತು ಬೆಳ್ಳಿ ಸಾಮಾನುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ಬಂಗಾರ, ಬೆಳ್ಳಿಯ ಸಾಮಾನು ಮತ್ತು ಹಣವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮು.ಮಾ.೧ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.೧೧.೧೨.೨೦೨೦ ರಂದು ಮುಂಜಾನೆ ನಾನು, ಚಾಸಾ-೮ ರವರು ಸೇರಿಕೊಂಡು ಊರಿಗೆ ಹೋಗಿದ್ದೆವು ಎಂದರೆ ಸರಿ. ನಂತರ ನಾವು ದಿ.೧೩.೧೨.೨೦೨೦ ರಂದು ಮನೆಗೆ ಬಂದು

ನೋಡಿದಾಗ ಅಲ್ಲಿ ಕೀಲಿ ಕೈ ಮುರಿದಿತ್ತು ಬಾಗಿಲು ತೆರೆದು ನೋಡಿದಾಗ ಬಾಗಿಲ ಕೊಂಡಿ ಮುರಿದಿತ್ತು ಎಂದರೆ ಸರಿ. ಸದರಿ ಮನೆಯಲ್ಲಿರುವ ಪೆಟ್ಟಿಗೆಯ ಚಾವಿಯು ಸಹ ಕೂಡ ಮುರಿದಿತ್ತು. ಪೆಟ್ಟಿಗೆಯನ್ನು ತೆಗೆದು ನೋಡಿದಾಗ ಅದರಲ್ಲಿ ೫ ಗ್ರಾಂ ನ ಒಂದು ಸುತ್ತುಂಗುರ, ೫ ಗ್ರಾಂನ ಬಂಗಾರದ ಜುಮುಕಿ, ಮೂರು ಬಂಗಾರದ ಮೂಗುತಿಗಳು, ಬೆಳ್ಳಿ ಉಡದಾರ ೫ ತೊಲೆ, ಬೆಳ್ಳಿಯ ಹಾಲಗಡಗ ೪ ತೊಲೆ, ಎರಡು ಬೆಳ್ಳಿ ಲಾಕೇಟುಗಳು ೩ವರೆ ಗ್ರಾಂ, ರೂ.೫೦೦೦೦/- ಕಳ್ಳತನವಾಗಿದ್ದವು ಎಂಧರೆ ಸರಿ. ನಂತರ ನಾನು ರಾತ್ರಿ ೧೧.೧೨.೨೦೨೦ ರಂದು ೧೨.೩೦ ಗಂಟೆ ಒಳಗಾಗಿ ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂಧರೆ ಸರಿ. ಸದರಿ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಇವರೇ ಕಳ್ಳತನ ಮಾಡಿರುತ್ತಾರೆ ಎಂದು ಆರೊಪಿತರನ್ನು ತೋರಿಸಿರುತ್ತಾರೆ ಎಂಧರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಐ.ಎಸ್. ವಕೀಲರಿಂದ</u>**

ನಾನು ಬೆಣ್ಣೆಶಿರೂರ ಗ್ರಾಮದಲ್ಲಿಯೇ ವಾಸವಿರುತ್ತೇನೆ. ನನ್ನ ಅಣ್ಣ ತಮ್ಮಂದಿರು ಸೋಲಾಪುರದಲ್ಲಿ ವಾಸವಿರುತ್ತಾರೆ. ನೀವು ಮನೆ ಬಿಟ್ಟು ಊರಿಗೆ ಹೋಗಿರುತ್ತೇವೆ ಎಂದು ಹೇಳುತ್ತಿರಲ್ಲ, ಆಜು ಬಾಜುದವರಿಗೆ ಹೇಳಿ ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾವು ಊರಿಗೆ ಹೋದ ಮರುದಿನವೇ ೧೨.೦೦ ಗಂಟೆ ಸುಮಾರಿಗೆ ವಾಪಸ್ಸು ಬಂದಿರುತ್ತೇವೆ. ಘಟನೆ ಕುರಿತು ನಾನು ಹೋಗುವುದಕ್ಕಿಂತ ಪೂರ್ವದಲ್ಲಿ ನಮ್ಮ ಆಜು ಬಾಜುದವರು ಯಾರೂ ಕರೆ ಮಾಡಿರುವುದಿಲ್ಲ. ಬಂಗಾರದ ಸಾಮಾನುಗಳು ಮನೆಯಲ್ಲಿಟ್ಟಿದ್ದೆನು ಎಂದು ತೋರಿಸಲು ಪೋಲಿಸರಿಗೆ ರಸೀದಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೆಟ್ಟಿಗೆಯನ್ನು ಒಡೆದು ಕಳ್ಳತನ ಮಾಡಿರುತ್ತಾರೆ ಎಂದು ಹೇಳುತ್ತಿರಲ್ಲ, ಸದರಿ ಪೆಟ್ಟಿಗೆಯನ್ನು ಪೋಲಿಸರು ಜಪ್ತಿಪಡಿಸಿಕೊಂಡರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯಲ್ಲಿ ೫೦೦೦೦/- ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಬರೆದಿರುತ್ತೀರಾ, ಮುಖ್ಯ ವಿಚಾರಣೆಯಲ್ಲಿ ೨,೭೫,೦೦೦/- ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಹೇಳಿರುತ್ತೀರಾ ಇದರಲ್ಲಿ ಯಾವುದು ನಿಜ ಎಂದರೆ ಸಾಕ್ಷಿ ೨,೭೫,೦೦೦/- ಕಳ್ಳತನ ಮಾಡಿಕೊಂಡು ಹೋಗಿರುವುದು ನಿಜ ಎಂದು ನುಡಿಯುತ್ತಾರೆ. ಆಜು ಬಾಜುದವರನ್ನು ಕರೆದು ಕಳ್ಳತನದ ವಿಷಯವನ್ನು ಕೇಳಿರುತ್ತೇನೆ. ಕಳ್ಳತನವಾದ ಎಷ್ಟು ದಿನದ ನಂತರ ಫಿರ್ಯಾದಿಯನ್ನು ಸಲ್ಲಿಸಿದ್ದೀರಾ ಎಂಧರೆ ಸಾಕ್ಷಿ ಮರುದಿನವೇ ಫಿರ್ಯಾದಿ ಸಲ್ಲಿಸಿರುತ್ತೇನೆ, ಪೋಲಿಸರು ೧೫ ದಿನಗಳ ನಂತರ ನಮ್ಮನ್ನು ಠಾಣೆಗೆ ಕರೆಸಿರುತ್ತಾರೆ ಎಂದು ನುಡಿಯುತ್ತಾರೆ.

ಕಳ್ಳತನವನ್ನು ಯಾರು ಮಾಡಿಕೊಂಡು ಹೋದರು, ಹೇಗೆ ಮಾಡಿಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ ಎಂಧರೆ ಸರಿ. ೧೫ ದಿನಗಳ ನಂತರ ಪೋಲಿಸರು ಠಾಣೆಗೆ ಕರೆದಿರುತ್ತಾರೆ ಎಂದು ಹೇಳುತ್ತಿರಲ್ಲ, ಅಲ್ಲಿ ಸುಮಾರು ೨-೩ ಗಂಟೆ ಇದ್ದೆನು. ನಮ್ಮನ್ನು ಸದರಿ ದಿನದಂದು ಪೋಲಿಸರು ಕರೆಸಿದ್ದರು, ಕರೆಸದಿದ್ದರೂ ಕರೆಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಠಾಣೆಯಲ್ಲಿ ನಾನು, ಚಾಸಾ-೪, ೫ ರವರು ಇದ್ದೆವು.

ನನ್ನ ಮಕ್ಕಳ ಮದುವೆ ಆಗಿತ್ತು ಅವರನ್ನು ಕಳಿಸುವುದಕ್ಕೋಸ್ಕರ ನಾನು, ನನ್ನ ಹೆಂಡತಿ ಹೋಗಿದ್ದೆವು, ಹೋಗಿ ಬರುವಷ್ಟರಲ್ಲಿ ನನ್ನ ಮನೆ ಕಳ್ಳತನವಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ

ಎಂಥರೆ ಸರಿ ಅಲ್ಲ. ಸದರಿ ನಾವು ಮರಳಿ ಬಂದು ನೋಡಿದಾಗ ನಮ್ಮ ಮನೆ ಚಾವಿ ಒಡೆದಿತ್ತು, ಟ್ರೆಜರಿ ಕೀಲಿ ಮುರಿದಿತ್ತು, ಬಟ್ಟೆಗಳನ್ನು ಚೆಲ್ಲಾಪಿಲ್ಲಿ ಆಗಿತ್ತು, ಮನೆಯ ವಸ್ತುಗಳು ಏನು ಇರಲಿಲ್ಲ, ನಾನು ನನ್ನ ಬೀರುದಲ್ಲಿ ೨,೭೫,೦೦೦/- ಮತ್ತು ೫ ಗ್ರಾಂ ಬಂಗಾರ ಎರಡು ಲಾಕೀಟು, ಮತ್ತು ಬೆಳ್ಳಿ ಸಾಮಾನುಗಳು ಇದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ನಂತರ ಮರುದಿನ ಹೋಗಿ ನಾನು ಪೊಲಿಸ್ ಠಾಣೆಯಲ್ಲಿ ಫಿರ್ಯಾದಿ ಸಲ್ಲಿಸಿರುತ್ತೇನೆ, ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ನಾನು ಫಿರ್ಯಾದಿ ಕೊಟ್ಟ ೧೫ ದಿನಗಳ ನಂತರ ಸಿ.ಪಿ.ಐ ರವರು ಪೋಲಿಸ್ ಠಾಣೆಗೆ ನಮ್ಮನ್ನು ಕರೆಸಿ ಇಷ್ಟಿಷ್ಟು ಬಂಗಾರ ಸಿಕ್ಕಿರುತ್ತದೆ, ನೀವು ನ್ಯಾಯಾಲಯಕ್ಕೆ ಹೋಗಿ ಬಿಡಿಸಿಕೊಳ್ಳಿ ಎಂದು ಸಲಹೆ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರು ನನ್ನನ್ನು ಕರೆಸಿದಾಗ ನನ್ನಿಂದ ಮಾಹಿತಿ ತೆಗೆದುಕೊಂಡು ಬಿಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ.

ದಿ.೧೧.೧೨.೨೦೨೦ ರಂದು ಮುಂಜಾನೆ ನಾನು, ಚಾಸಾ-೮ ರವರು ಸೇರಿಕೊಂಡು ಊರಿಗೆ ಹೋಗಿದ್ದೆವು, ನಂತರ ನಾವು ದಿ.೧೩.೧೨.೨೦೨೦ ರಂದು ಮನೆಗೆ ಬಂದು ನೋಡಿದಾಗ ಅಲ್ಲಿ ಕೀಲಿ ಕೈ ಮುರಿದಿತ್ತು ಬಾಗಿಲು ತೆರೆದು ನೋಡಿದಾಗ ಬಾಗಿಲ ಕೊಂಡಿ ಮುರಿದಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ಸದರಿ ಮನೆಯಲ್ಲಿರುವ ಪೆಟ್ಟಿಗೆಯ ಚಾವಿಯು ಸಹ ಕೂಡ ಮುರಿದಿತ್ತು. ಪೆಟ್ಟಿಗೆಯನ್ನು ತೆಗೆದು ನೋಡಿದಾಗ ಅದರಲ್ಲಿ ೫ ಗ್ರಾಂ ನ ಒಂದು ಸುತ್ತುಂಗುರ, ೫ ಗ್ರಾಂನ ಬಂಗಾರದ ಜುಮುಕಿ, ಮೂರು ಬಂಗಾರದ ಮೂಗುತಿಗಳು, ಬೆಳ್ಳು ಉಡದಾರ ೫ ತೊಲೆ, ಬೆಳ್ಳಿಯ ಹಾಲಗಡಗ ೪ ತೊಲೆ, ಎರಡು ಬೆಳ್ಳಿ ಲಾಕೇಟುಗಳು ೩ವರೆ ಗ್ರಾಂ, ರೂ.೫೦೦೦೦/- ಕಳ್ಳತನವಾಗಿದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ. ನಂತರ ನಾನು ರಾತ್ರಿ ೧೧.೧೨.೨೦೨೦ ರಂದು ೧೨.೩೦ ಗಂಟೆ ಒಳಗಾಗಿ ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿ ಪಿರ್ಯಾದಿ ಸಲ್ಲಿಸಿರುತ್ತೇನೆ, ಸದರಿ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಇವರೇ ಕಳ್ಳತನ ಮಾಡಿರುತ್ತಾರೆ ಎಂದು ಆರೊಪಿತರನ್ನು ತೋರಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ